## 10

# “ದೇವರ ಸಭೆ”

*“ದೇವರ ಚಿತ್ತದಿಂದ ಯೇಸುಕ್ರಿಸ್ತನ ಅಪೊಸ್ತಲನಾಗುವದಕ್ಕೆ ಕರೆಯಲ್ಪಟ್ಟ ಪೌಲನೂ ಸಹೋದರನಾದ ಸೊಸ್ಥೆನನೂ ಕೊರಿಂಥದಲ್ಲಿನ ದೇವರ ಸಭೆಗೆ ಅಂದರೆ ಕ್ರಿಸ್ತೇಸುವಿನಲ್ಲಿ ಪ್ರತಿಷ್ಠಿತರೂ ದೇವಜನರಾಗುವದಕ್ಕೆ ಕರೆಯಲ್ಪಟ್ಟವರೂ ಆಗಿರುವವರಿಗೆ ಮತ್ತು ನಮಗೂ ಸಮಸ್ತ ದೇವಜನರಿಗೂ ಕರ್ತನಾಗಿರುವ ಯೇಸುಕ್ರಿಸ್ತನ ನಾಮಸ್ಮರಣೆಯನ್ನು ಮಾಡುವವರು ಎಲ್ಲಿದ್ದರೂ ಅವರೆಲ್ಲರಿಗೆ ಬರೆಯುವುದು” (1 ಕೊರಿಂಥ 1:1, 2).*

ಇಬ್ಬರ ಮಧ್ಯದಲ್ಲಿಯ ಯೋಗ್ಯ ತಿಳುವಳಿಕೆಗಾಗಿ ಸ್ಪಷ್ಟತೆ ಮತ್ತು ನಾಮಾಂಕಿತ ಅಗತ್ಯವಾಗಿರುತ್ತದೆ. ಸಮಯದ ಪ್ರಾರಂಭದಲ್ಲಿ ದೇವರು ಮನುಷ್ಯನಿಗೆ ಕೊಟ್ಟ ಭಾಷೆಯ ಕಾರ್ಯದ ಭಾಗವು ಭಿನ್ನತೆಮಾಡುವ ಮತ್ತು ಹೆಸರಿಡುವ ಕಾರ್ಯವಾಗಿತ್ತು. ಆದಾಮನಿಗೆ ದೇವರು ಕೊಟ್ಟ ಕೆಲಸಗಳಲ್ಲಿ ಮೊದಲನೆಯದು ಸೃಷ್ಟಿಸಲ್ಪಟ್ಟ ಜಗತ್ತಿನ ಪ್ರಾಣಿಗಳಿಗೆ ಮತ್ತು ಪಕ್ಷಿಗಳಿಗೆ ಹೆಸರನ್ನು ಇಡುವುದಾಗಿತ್ತು: “ಆಗ ಆತನು ಎಲ್ಲಾ ಭೂಜಂತುಗಳನ್ನೂ ಆಕಾಶದ ಪಕ್ಷಿಗಳನ್ನೂ ಮಣ್ಣಿನಿಂದ ನಿರ್ಮಿಸಿ - ಇವುಗಳಿಗೆ ಆ ಮನುಷ್ಯನು ಏನೇನು ಹೆಸರಿಡುವನು ನೋಡೋಣ ಎಂದು ಅವನ ಬಳಿಗೆ ಬರಮಾಡಿದನು. ಮನುಷ್ಯನು ಒಂದೊಂದು ಪ್ರಾಣಿಗೆ ಯಾವ ಯಾವ ಹೆಸರಿಟ್ಟನೋ ಅದೇ ಹೆಸರಾಯಿತು” (ಆದಿಕಾಂಡ 2:19). ಮನುಷ್ಯನು ತನ್ನ ಭಾಷಾ ಸಾಮರ್ಥ್ಯವನ್ನು ನಿರ್ಮಿಸಲಿಲ್ಲ; ಆದರೆ ಮನುಷ್ಯನು ಸೃಷ್ಟಿಯ ಸಮಯದಲ್ಲಿ, ತನ್ನ ಮುಂದೆ ತರಲ್ಪಟ್ಟ ಪ್ರಾಣಿಗಳನ್ನು ವರ್ಗೀಕರಿಸಲು ಭಾಷೆಯ ನಿಪುಣತೆಯೊಂದಿಗೆ ತುಂಬಿಸಲ್ಪಟ್ಟನು.

ಸಾಮಾನ್ಯ ನಿಯಮದಂತೆ, ನಾವು ನಮ್ಮ ಗುರುತಿಸುವಿಕೆಯಲ್ಲಿ ಕಡಿಮೆ ನಿಶ್ಚಿತತೆಯುಳ್ಳವರಾಗಿರುವಾಗ, ಒಬ್ಬರಿಗೊಬ್ಬರ ಸಂಪರ್ಕಿಸುವಿಕೆಯು ಹೆಚ್ಚು ಕಠಿಣವಾದದ್ದಾಗುತ್ತದೆ. ವಿಪರ್ಯಾಸವಾಗಿ, ನಮ್ಮ ನಿರ್ದೇಶನಗಳಲ್ಲಿ ನಾವು ಹೆಚ್ಚು ಸ್ಪಷ್ಟವಾದವರೂ ನಂಬಲರ್ಹರೂ ಆಗಿರುವಾಗ ಇತರರೊಂದಿಗೆ ಸಂಪರ್ಕವು ಹೆಚ್ಚು ಪರಿಣಾಮಕಾರಿಯಾದದ್ದೂ ಯಶಸ್ವಿಯಾದದ್ದೂ ಆಗುತ್ತದೆ.

ವರ್ಗೀಕರಿಸುವುದು ಮತ್ತು ಸ್ಪಷ್ಟಪಡಿಸುವುದು ನಮ್ಮ ಸಂಭಾಷಣೆಯ ವಿಷಯಗಳನ್ನು ತೋರಿಸುವುದರಲ್ಲಿ ಸಹಾಯಮಾಡುವುದಲ್ಲದೇ ಅವು ಉದ್ದೇಶ, ಸ್ಥಳ ಇಲ್ಲವೇ ಚರ್ಚಿಸಲ್ಪಡುತ್ತಿರುವ ವ್ಯಕ್ತಿಯ ಬಗ್ಗೆ ಆಂತರಿಕ ನೋಟದ ಕಿಟಿಕಿಗಳಂತೆ ಸಹಾಯ ಮಾಡುವವು, “ಇದು ಬಾಬ್‌ನ ಬಾಲಕ” ಎಂದು ನಾವು ಹೇಳಿದರೆ, ಇದು ಬಾಲಕ ಮತ್ತು ಅವನ ತಂದೆಯ ಮಧ್ಯದಲ್ಲಿಯ ಸಂಬಂಧವನ್ನು ವಿವರಿಸುವುದು, ಮತ್ತು ಅವರಿಬ್ಬರ ಹತ್ತಿರ ಹತ್ತಿರದ ವಯಸ್ಸನ್ನು ತಿಳಿಸುವುದು. ಮಗನು ಒಬ್ಬ ಬಾಲಕನು. ಬಾಬ್ ಒಬ್ಬ ಪುರುಷನು ಆಗಿರುವನು.

ದೇವರು ತನ್ನ ಚಿತ್ತವನ್ನು ನಮಗೆ ಕೊಡುವುದಕ್ಕಾಗಿ ತನ್ನ ವಾಕ್ಯದಲ್ಲಿ ಹಲವಾರು

ಭಿನ್ನಪಡಿಸುವ ವ್ಯಕ್ತಪಡಿಸುವಿಕೆಗಳನ್ನು ಉಪಯೋಗಿಸಿದ್ದಾನೆ. ತನ್ನ ಪ್ರೇರೇಪಿತ ಪ್ರಕಟನೆಯ ಭಾಗವಾಗಿ, ಆತನ ವಿವರಣಾತ್ಮಕ ಮಾತುಗಳು ಯಾವಾಗಲೂ ಯೋಗ್ಯವಾದವುಗಳೂ ಸ್ಪಷ್ಟವಾದವುಗಳೂ ಆಗಿರುತ್ತವೆ. ಆದುದರಿಂದ ಪ್ರತಿಯೊಂದು ಜಾಗರೂಕ ವಿಚಾರಿಸುವಿಕೆಗೆ ಯೋಗ್ಯವಾಗಿದೆ.

ಅವುಗಳಲ್ಲಿ ನಮಗೆ ವಿಶೇಷ ಆಸಕ್ತಿಯುಳ್ಳವುಗಳು ಸಭೆಗಾಗಿ ಪರಿಶುದ್ಧಾತ್ಮನು ಆಯ್ದುಕೊಂಡ ಪದಗಳು. ಅವು ಸಭೆಯ ತತ್ವ ಮತ್ತು ಸ್ವಭಾವವನ್ನು ಅರ್ಥಮಾಡಿ ಕೊಳ್ಳುವುದಕ್ಕಾಗಿ ಅವು ಮಾರ್ಗಗಳಾಗಿವೆ. ಸಭೆಯ ಗುಣಲಕ್ಷಣವನ್ನು ಕುರಿತು ದೇವರ ವಾಕ್ಯದಿಂದ ಪ್ರತಿಯೊಂದು ಸತ್ಯವನ್ನು ಹಿಡಿಯುವದಕ್ಕಾಗಿ, ನಾವು ದೇವರು ಉಪಯೋಗಿಸಿದ ಪ್ರತಿಯೊಂದು ಉಲ್ಲೇಖವನ್ನು ಆಳವಾಗಿ ಅಧ್ಯಯನ ಮಾಡಬೇಕು.

ಹೊಸ ಒಡಂಬಡಿಕೆಯ ಬರಹಗಾರರಿಂದ ಬಹಳವಾಗಿ ಉಪಯೋಗಿಸಿದ ಒಂದು ಚಿತ್ರವು ಸೂಚನಾತ್ಮಕವಾದ ಮಾತು "ದೇವರ ಸಭೆ" ಎಂಬುದು. ಇದು ಪ್ರಮುಖ ಗುಣಲಕ್ಷಣವಾಗಿದ್ದು, ಇದು ಪರಿಶುದ್ಧಾತ್ಮನಿಂದ ಹನ್ನೆರಡು ಸಲ ಉಪಯೋಗಿಸಲ್ಪಟ್ಟಿದ್ದು, ಎಂಟುಸಲ, "ದೇವರ ಸಭೆ" ಎಂದು, ಮೂರು ಸಲ "ದೇವರ ಸಭೆಗಳು" ಎಂದು, ಮತ್ತು ಒಂದು ಸಲ "ಜೀವಿಸುವ ದೇವರ ಸಭೆ" ಎಂದು ಉಪಯೋಗಿಸಲ್ಪಟ್ಟಿದೆ.[1]

ವಿಗ್ರಹಗಳಿಗೆ ಯಜ್ಞವಾಗಿ ಅರ್ಪಿಸಿದ ಮಾಂಸವನ್ನು ಕ್ರೈಸ್ತರು ತಿನ್ನುವುದನ್ನು ಪೌಲನು ಚರ್ಚಿಸಿದಾಗ, "ಯೆಹೂದ್ಯರಿಗಾಗಲಿ ಗ್ರೀಕರಿಗಾಗಲಿ ದೇವರ ಸಭೆಗಾಗಲಿ ವಿಘ್ನವಾಗಬೇಡಿರಿ" (1 ಕೊರಿಂಥ 10:32) ಎಂದು ಉಪದೇಶ ಮಾಡಿದನು. ಕೊರಿಂಥದವರು ಕರ್ತನ ಭೋಜನವನ್ನು ದುರುಪಯೋಗಪಡಿಸಿದ್ದನ್ನು ಕುರಿತು ಅವನು ಹೀಗೆ ಬರೆದನು, "ಏನು ಉಣ್ಣುವದಕ್ಕೂ ಕುಡಿಯುವದಕ್ಕೂ ಮನೆಗಳಿಲ್ಲದೆ ಇದ್ದೀರಾ? ಅಥವಾ ದೇವರ ಸಭೆಯನ್ನು ಅಸಡ್ಡೆ ಮಾಡಿ ಏನೂ ಇಲ್ಲದವರನ್ನು ನಾಚಿಕೆಪಡಿಸುತ್ತೀರಾ? ನಾನು ನಿಮಗೇನು ಹೇಳಲಿ? ನಿಮ್ಮನ್ನು ಹೊಗಳಲೋ? ಈ ವಿಷಯದಲ್ಲಿ ಹೊಗಳುವದಿಲ್ಲ" (1 ಕೊರಿಂಥ 11:22). ಹೀಗೆ ಹೇಳುವುದರಿಂದ ಪೌಲನು ತನ್ನ ಮಾರ್ಪಡುವಿಕೆಯ ಮೊದಲಿನ ಜೀವಿತ ಜೀವಿಸಿದ್ದಕ್ಕೆ ಶೋಕ ವ್ಯಕ್ತಪಡಿಸಿದನು: "ಹಿಂದೆ ನಾನು ಯೆಹೂದ್ಯ ಮತದಲ್ಲಿದ್ದಾಗ ನನ್ನ ನಡತೆ - ಎಂಥದೆಂದು ನೀವು ಕೇಳಿದ್ದೀರಷ್ಟೆ. ನಾನು ದೇವರ ಸಭೆಯನ್ನು ಅತ್ಯಂತವಾಗಿ ಹಿಂಸೆಪಡಿಸಿ ಹಾಳು ಮಾಡುತ್ತಿದ್ದೆನು" (ಗಲಾತ್ಯ 1:13). "ಸ್ವಂತ ಮನೆಯವರನ್ನು ಆಳುವುದಕ್ಕೆ ತಿಳಿಯದವನು ದೇವರ ಸಭೆಯನ್ನು ಹೇಗೆ ಪರಾಮರಿಸುವನು?" (1 ತಿಮೊಥೆ 3:5) ಎಂದು ಪೌಲನು ಹಿರಿಯರ ಬಗ್ಗೆ ಹೇಳಿದನು.

ಪರಿಶುದ್ಧಾತ್ಮನು ತನ್ನ ದೈವಿಕ ಪ್ರಕಟನೆಯಲ್ಲಿ ಈ ಮಾತು ಪ್ರಕಾಶಕೊಡುವಂಥದ್ದಾಗಿರಬೇಕೆಂದು ಉದ್ದೇಶಿಸಿದ್ದು ಸ್ಪಷ್ಟವಾಗಿದೆ. ಅದರ ಹೊರಗೆ ಮತ್ತು ಅದರ ತಿರುಳಿನಲ್ಲಿ, "ದೇವರ ಸಭೆ" ಎಂಬ ನಾಮಾಂಕಿತವು, ಸಭೆಯು ದೇವ ರೊಂದಿಗೆ ಇಟ್ಟುಕೊಂಡಿರುವ ಸಜೀವ ಸಂಬಂಧವನ್ನು ತೋರಿಸುತ್ತದೆ.

## ಅದರ ಮೂಲದೊಳಗೆ

ಮೊದಲನೆಯದು, ಅದು ಸಭೆಯ ಮೂಲದ ಬಗ್ಗೆ ಅಂತರ್ ದೃಷ್ಟಿಯನ್ನು ಕೊಡುತ್ತದೆ. ಸಭೆಯನ್ನು ಅಸ್ತಿತ್ವದಲ್ಲಿ ತರುವದರೊಂದಿಗೆ ದೇವರಿಗೆ ಏನೋ ಇತ್ತು ಎಂಬ ಸತ್ಯವನ್ನು ನಮ್ಮ ಜ್ಞಾಪಕಕ್ಕೆ ತರುತ್ತದೆ.

ಜಗದುತ್ಪತ್ತಿಗೆ ಮೊದಲೇ ದೇವರು ಶಿಲುಬೆಯ ಮತ್ತು ಸಭೆಯ ಮುಖಾಂತರ ಪಾಪಿಗಳ ರಕ್ಷಣೆಯನ್ನು ಯೋಚಿಸಿದನು, ಹಾಗಾದರೆ ಆ ಅದ್ವಿತೀಯ ಅರ್ಥದಲ್ಲಿ

ಸಭೆಯು ದೇವರ ಸಭೆ ಆಗಿರುತ್ತದೆ. "ಆದರೆ ಒಂದು ವೇಳೆ ನಾನು ತಡಮಾಡಿದರೂ ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನಾದ ದೇವರ ಸಭೆಯಲ್ಲಿ ನಡೆದುಕೊಳ್ಳ ಬೇಕಾದ ರೀತಿಯು ನಿನಗೆ ಗೊತ್ತಾಗಬೇಕೆಂದು ಈ ಸಂಗತಿಗಳನ್ನು ಬರೆದಿದ್ದೇನೆ. ಆ ಸಭೆಯು ಸತ್ಯಕ್ಕೆ ಸ್ತಂಭವೂ ಆಧಾರವೂ ಆಗಿದೆ" (1 ತಿಮೊಥೆ 3:15) ಎಂದು ಪೌಲನು ಬರೆದನು.

ಸೃಷ್ಟಿಗಿಂತ ಮೊದಲು ದೇವರು ಕ್ರಿಸ್ತನನ್ನು ಆತ್ಮಿಕ ಮನೆಯ, ಸಭೆಯ ಮುಖ್ಯ ಮೂಲೆಗಲ್ಲಾಗಿ - ಆಯ್ದುಕೊಂಡ ಮತ್ತು ಅಮೂಲ್ಯವಾದದ್ದನ್ನಾಗಿ - ಆಯ್ದುಕೊಂಡನು (1 ಪೇತ್ರ 2:6). "ಆತನು ಜಗದುತ್ಪತ್ತಿಗೆ ಮೊದಲೇ ಗೊತ್ತು ಮಾಡಲ್ಪಟ್ಟನು" (1 ಪೇತ್ರ 1:20, 21) ಎಂದು ಪೇತ್ರನು ಬರೆದನು. ಸಮಯದ ಮೊದಲೇ, ದೇವರು ತನ್ನ ಸಂದೇಶ ವಾಹಕರಾಗಿರಲು ಮತ್ತು ತನ್ನ ಹೆಸರನ್ನು ಮಹಿಮೆಪಡಿಸಲು ದೇವದೂತರನ್ನು ಆಯ್ಕೆ ಮಾಡಿದನು (1 ತಿಮೊಥೆ 5:21).

ನಿತ್ಯತ್ವದಲ್ಲಿ ದೇವರು, ಕ್ರಿಸ್ತನಲ್ಲಿ ನಮಗೆ ನಿರೀಕ್ಷೆಯನ್ನು ಕೊಡುವುದಕ್ಕಾಗಿ ಒಂದು ಮಾರ್ಗವನ್ನು ಕಲ್ಪಿಸಿದನು ಮತ್ತು ಆ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ವಾಗ್ದಾನ ಮಾಡಿದನು. "ಸುಳ್ಳಾಡದ ದೇವರು ಆ ನಿತ್ಯ ಜೀವವನ್ನು ಕೊಡುತ್ತೇನೆಂದು ಅನಾದಿಕಾಲದಲ್ಲಿ ವಾಗ್ದಾನ ಮಾಡಿ ತನ್ನ ಕ್ಲುಪ್ತ ಸಮಯದಲ್ಲಿ ವಾಗ್ದಾನ ನೆರವೇರಿಸಿ ಪ್ರಸಂಗದ ಮೂಲಕ ಪ್ರಕಟಿಸದನು" (ತೀತ 1:2) ಎಂದು ಪೌಲನು ತೀತನಿಗೆ ಬರೆದನು. ಈ ವಚನದಲ್ಲಿಯ ಕೊನೆಯ ಮಾತು, "ಅನಾದಿಕಾಲದಲ್ಲಿ" ಎಂದು ಭಾಷಾಂತರಿಸಲ್ಪಟ್ಟರೆ ಇದು ಮಾನವನಿಗೆ ತಿಳಿದಿದ್ದ ಅತೀ ಪುರಾತನವಾದ ವಾಗ್ದಾನ ವಾಗಿದೆ. ರಕ್ಷಣೆಯ ಯೋಜನೆಯ ವಿವರಗಳು, ಯೇಸುವಿನ ವಿಮೋಚನಾ ಯಜ್ಞವು ಮತ್ತು ಆ ಯಜ್ಞವನ್ನು ಹೇಗೆ ಸ್ವೀಕರಿಸಬೇಕೆಂಬುದು ದೇವರ ಮನಸ್ಸಿನಲ್ಲಿ, ಆತನು ಪ್ರಥಮ ಹುಲ್ಲು ಕಡ್ಡಿಯನ್ನು, ಪ್ರಥಮ ಕಲ್ಲನ್ನು, ಬೆಳಕಿನ ಪ್ರಥಮ ಕಾರಣವನ್ನು, ಇಲ್ಲವೇ ಮಂಜಿನ ಪ್ರಥಮ ಹನಿಯನ್ನು ಸೃಷ್ಟಿಸುವ ಮೊದಲೇ ರಚಿಸಲ್ಪಟ್ಟಿದ್ದವು, "ನಮ್ಮಲ್ಲಿ ಸುಕೃತ್ಯಗ ಳನ್ನು ನೋಡಿದ್ದರಿಂದಲ್ಲ, ತನ್ನ ಸಂಕಲ್ಪವನ್ನು ಅನುಸರಿಸಿ ಕೃಪೆಯಿಂದಲೇ ನಮ್ಮನ್ನು ರಕ್ಷಿಸಿ ಪರಿಶುದ್ಧರಾಗುವದಕ್ಕೆ ಕರೆದನು. ಆತನು ಅನಾದಿಕಾಲದಲ್ಲಿ ಆ ಕೃಪೆಯನ್ನು ಕ್ರಿಸ್ತ ಯೇಸುವಿನಲ್ಲಿ ನಮಗೆ ಅನುಗ್ರಹಿಸಿ ಈಗ ನಮ್ಮ ರಕ್ಷಕನಾದ ಕ್ರಿಸ್ತ ಯೇಸುವಿನ ಪ್ರತ್ಯಕ್ಷತೆಯ ಮೂಲಕ ಅದನ್ನು ಪ್ರಕಾಶಪಡಿಸಿದ್ದಾನೆ" (2 ತಿಮೊಥೆ 1:9, 10) ಎಂದು ಪೌಲನು ಹೇಳಿದ್ದಾನೆ.

ವಿಮೋಚನೆಯು ದೇವರ ಕೊಡುಗೆಗೆ ಕೇಂದ್ರ ಸತ್ಯವು ಸಭೆಯನ್ನು ರೂಪಿಸುವ ಶಿಲುಬೆಯ ಮೇಲಿನ ಕ್ರಿಸ್ತನ ಮರಣಕ್ಕೆ ಮಾನವನ ಉತ್ತರವಾಗಿದೆ (ಅಪೊಸ್ತಲರ ಕೃತ್ಯಗಳು 20-28; ಎಫೆಸ 5:25). ಸಭೆಯು ದೇವರ ಮನಸ್ಸಿನಲ್ಲಿ, ಆತನು ಕ್ರಿಸ್ತನ ಮುಖಾಂತರ ಸಾಧಿಸುವ ಆತನ ನಿತ್ಯವಾದ ಉದ್ದೇಶದ ಭಾಗವಾಗಿತ್ತೆಂದು ಪೌಲನು ಹೇಳಿದ್ದರಲ್ಲಿ ಆಶ್ಚರ್ಯವಿಲ್ಲ: "ದೇವರು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಅನಾದಿ ಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾವಿಧವಾದ ಜ್ಞಾನವು ಪರಲೋಕ ದಲ್ಲಿ ರಾಜತ್ವಗಳಿಗೂ ಅಧಿಕಾರಿಗಳಿಗೂ ಈಗ ಕ್ರೈಸ್ತ ಸಭೆಯ ಮೂಲಕ ಗೊತ್ತಾಗಬೇಕೆಂಬು ದನ್ನು ಉದ್ದೇಶಿಸಿದ್ದನು" (ಎಫೆಸ 3:10, 11).

ಬೈಬಲ್ ಪ್ರದೇಶಗಳಲ್ಲಿ ಯಾತ್ರಿಕರ ಬಹು ಪ್ರಸಿದ್ಧವಾದ ಸ್ಥಳವು ಯಾಕೋಬನ ಬಾವಿ. ಯೇಸುವು ಸಮಾರ್ಯವನ್ನು ದಾಟಿ ಹೋಗುತ್ತಿದ್ದಾಗ, ಯಾಕೋಬನ ಬಾವಿಯ ಬಳಿಯಲ್ಲಿ ವಿಶ್ರಮಿಸಿದನೆಂದು ಯೋಹಾನನು ಹೇಳಿದ್ದಾನೆ (ಯೋಹಾನ 4:6). ಯಾಕೋಬನು ಪದ್ದನ್‌ಅರಾಮಿನಿಂದ ಶೆಕೆಮ್‌ಗೆ ಹಿಂದಿರುಗಿದಾಗ, ಶೆಕೆಮ್‌ನ

ಪಶ್ಚಿಮದಲ್ಲಿ ವಸತಿ ಮಾಡಿ, ತಾನು ವಸತಿಮಾಡಿದ ಸ್ಥಳವನ್ನು ಕೊಂಡುಕೊಂಡನು (ಆದಿಕಾಂಡ 33:18, 19). ಅಲ್ಲಿ ಯಾಕೋಬನು ಬಾವಿಯನ್ನು ತೋಡಿಸಿದನೆಂದು ಹಳೇ ಒಡಂಬಡಿಕೆಯಲ್ಲಿ ಎಲ್ಲಿಯೂ ಹೇಳಲ್ಪಡದಿದ್ದರೂ, ಅವನು ಹಾಗೆ ಮಾಡಿದನೆಂದು ಹೊಸ ಒಡಂಬಡಿಕೆಯಲ್ಲಿ ಪ್ರೇರೇಪಿಸಲ್ಪಡದ ಸಾಂಪ್ರದಾಯವು ಬಹಳ ಸಮಯದಿಂದ ರೂಢಿಯಲ್ಲಿತ್ತು (ಯೋಹಾನ 4:12). ನೂರಾರು ಜನ ಸಂದರ್ಶಕರು ಅನುದಿನವೂ ಈ ಸ್ಥಳಕ್ಕೆ ಬರುವರು ಮತ್ತು ಅದರ ಪುರಾತನ ಹಿಂದಿನ ಸಮಯವನ್ನು ಧ್ಯಾನಿಸುವುದರಲ್ಲದೇ ಸಮಾರ್ಯದ ಬಾವಿಯ ಬಳಿಯಲ್ಲಿ ಸಮಾರ್ಯದ ಮಹಿಳೆಯೊಂದಿಗೆ ಯೇಸುವಿನ, ದೇವರ ಕುಮಾರನ ಸಂಗಡ ಮಾಡಿದ ಸಂಭಾಷಣೆಯನ್ನು ಧ್ಯಾನಿಸುವರು. ಸಂದರ್ಶಕರು ಈ ಬಾವಿಯ ಪಕ್ಕದಲ್ಲಿ ನಿಂತುಕೊಂಡು ಯೋಹಾನ 4ನೆಯ ಅಧ್ಯಾಯವನ್ನು ಓದಲು ಬಯಸುವರು. ಇದಲ್ಲದೇ, ಅವರು ಗೆರಿಜಿಮ್ ಬೆಟ್ಟದ ಕಡೆಗೆ ನೋಡಲು ಬಯಸುವರು. ಅದು ಬಾವಿಯ ಹಿಂದೆ ಮೂರು ಸಾವಿರ ಅಡಿ ಎತ್ತರವಿರುವುದು, ಸಮಾರ್ಯದ ಮಹಿಳೆಯ ಮಾತುಗಳನ್ನೂ ನಮ್ಮ ರಕ್ಷಕನ ಉತ್ತರವನ್ನೂ ಯೋಚಿಸುವರು, “ನಮ್ಮ ಹಿರಿಯರು ಈ ಬೆಟ್ಟದಲ್ಲಿ ದೇವಾರಾಧನೆ ಮಾಡುತ್ತಿದ್ದರು; ಆದರೆ ನೀವು ಆರಾಧನೆ ಮಾಡತಕ್ಕ ಸ್ಥಳವು ಯೆರೂಸಲೇಮಿನಲ್ಲಿ ಅದೆ ಅನ್ನುತ್ತೀರಿ” (ಯೋಹಾನ 4:20) ಎಂದು ಆಕೆ ಹೇಳಿದಳು. ಅದಕ್ಕೆ ಉತ್ತರವಾಗಿ ಯೇಸುವು, “ಅಮ್ಮಾ, ಆ ಕಾಲದಲ್ಲಿ ನೀವು ತಂದೆಯನ್ನು ಆರಾಧಿಸಬೇಕಾದರೆ ಈ ಬೆಟ್ಟಕ್ಕೂ ಹೋಗುವದಿಲ್ಲ, ಯೆರೂಸಲೇಮಿಗೂ ಹೋಗುವದಿಲ್ಲ” (ಯೋಹಾನ 4:21) ಎಂದು ಹೇಳಿದನು.

ಅದರ ಹೆಸರು, “ಯಾಕೋಬನ ಬಾವಿ,” ಎಂಬುದು ಈ ಪ್ರಸಿದ್ಧ ಬಾವಿಯ ಬಗ್ಗೆ ಏನು ಹೇಳುತ್ತದೆ? ಅದರ ಹೆಸರಿನಿಂದ ಅದರ ಮೂಲಕ್ಕೆ ಸ್ಪಷ್ಟವಾದ ಉಲ್ಲೇಖವು ಕೊಡಲ್ಪಟ್ಟಿದೆ. ಅದರ ನಾಮಾಂಕಿತವು ಬಾವಿಯು ಹೇಗೆ ಅಸ್ತಿತ್ವದಲ್ಲಿ ಬಂದಿತು ಮತ್ತು ಪ್ರಾರಂಭದಲ್ಲಿ ಅದನ್ನು ಯಾರು ಉಪಯೋಗಿಸಿದರು ಎಂಬುವುದಕ್ಕೆ ಕೆಲವೊಂದನ್ನು ನಮಗೆ ಹೇಳುತ್ತದೆ. ಅದು ಯಾಕೋಬನು ಆ ಬಾವಿಯನ್ನು ತೆಗೆಯಿಸಿದನು ಇಲ್ಲವೇ ಅಗಿದನು ಎಂಬ ಪುರಾತನ ಸಾಂಪ್ರದಾಯವನ್ನು ಪ್ರತಿಬಿಂಬಿಸುತ್ತದೆ, ಅವನು ಪಿತೃವಾಗಿದ್ದು, ಅವನ ಹೆಸರು ಇಸ್ರಾಯೇಲ್ ಎಂದು ಬದಲಾಯಿಸಲ್ಪಟ್ಟಿತು. ಅವನು ಇಸ್ರಾಯೇಲ್ಯರ ಪೂರ್ವಜನಾಗಿದ್ದನು. ಅವನು ತನಗಾಗಿ, ತನ್ನ ಕುಟುಂಬಕ್ಕಾಗಿ, ಮತ್ತು ತನ್ನ ದನ ಕುರಿಗಳಿಗಾಗಿ ನೀರನ್ನು ಸೇದಿದನು. ಹೀಗೆ ಶತಮಾನಗಳ ನಂತರ, ಮಹಾ ಪಿತೃವಾದ ಯಾಕೋಬನ ಜೀವನಕ್ಕೆ ಮೌನ ಸಾಕ್ಷಿಯಾಗಿ ಬಾವಿಯು ನಿಂತಿರುತ್ತದೆ.

ಸಭೆಯು *ದೇವರ* ಸಭೆಯಾಗಿದೆ. ಅದು ದೇವರ ಜ್ಞಾನದ ಮತ್ತು ಶಕ್ತಿಯ ಸೃಷ್ಟಿಯಾಗಿದೆ, ಮಾನವ ಯೋಚನೆಯ ಇಲ್ಲವೇ ನಕ್ಷೆಯ ಸಂಶೋಧನೆಯಾಗಿರುವುದಿಲ್ಲ. ಪರಿಶುದ್ಧಾತ್ಮನು “ದೇವರ ಸಭೆ” ಎಂಬ ಮಾತನ್ನು ತಪ್ಪಿಲ್ಲದ ಪರಿಪೂರ್ಣತೆಯೊಂದಿಗೆ ಉಪಯೋಗಿಸಿದನು ಮತ್ತು ಹೊಸ ಒಡಂಬಡಿಕೆಯ ಓದುಗರು ಅದು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಬೇಕು ಎಂಬುದು ಆತನ ಉದ್ದೇಶವಾಗಿತ್ತು. ಅದು ಅರ್ಥವಿಲ್ಲದ ಮಾತಾಗಿರುವುದಿಲ್ಲ; ಅದು ಸ್ಥಳವನ್ನು ತುಂಬಿದವರಾಗಿರುವುದಿಲ್ಲ; ಅದು ಸಭೆಯ ಬಗ್ಗೆ ಸತ್ಯವಾಗಿದೆ. ಸಭೆಯ ಹಿಂದೆ ಮತ್ತು ಸಭೆಯಲ್ಲಿ ದೇವರು ಇದ್ದಾನೆ. ದೇವರು ಭೂಲೋಕದಲ್ಲಿ ಮಾಡುತ್ತಿರುವಂಥದ್ದರಲ್ಲಿ ಭಾಗಿಯಾಗಬೇಕೆಂದು ಬಯಸಿದರೆ, ಅವನು ತನ್ನ ನಂಬಿಕೆ ಮತ್ತು ವಿಧೇಯತೆಯ ಮೂಲಕ, ಅವನು ದೇವರು ತನ್ನನ್ನು ಆತನ ದೈವಿಕ ಸಭೆಯೊಳಗೆ ಕೂಡಿಸಿಕೊಳ್ಳಲು ಬಿಡುವನು.

## ಅದರ ಒಡತನದೊಳಗೆ

ಎರಡನೆಯದಾಗಿ "ದೇವರ ಸಭೆ" ಎಂಬ ನಾಮಾಂಕಿತವು ಸಭೆಯ ಒಡತನ ದೊಳಗೆ ಆಂತರಿಕ ದೃಷ್ಟಿಯನ್ನು ಕೊಡುತ್ತದೆ. ಅದು ಸ್ವಾಸ್ತ್ಯದ - ಸಭೆಯು ದೇವರಿಗೆ ಒಳಪಟ್ಟಿದೆ ಎಂಬ ವಿಚಾರವನ್ನು ಸೂಚಿಸುತ್ತದೆ.

ಪೌಲನು ಎಫೆಸದ ಹಿರಿಯರನ್ನು ಒತ್ತಾಯಿಸಿದನು: "ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವದಕ್ಕಾಗಿ ಪರಿಶುದ್ಧಾತ್ಮನು ನಿಮ್ಮನ್ನೇ ಈ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ" (ಅಪೊಸ್ತಲರ ಕೃತ್ಯಗಳು 20:28). ಕೊರಿಂಥದಲ್ಲಿಯ ಸಭೆಗೆ ಅವನು ಅವರು, "ದೇವರ ಸಭೆಗೆ ಅಂದರೆ ಕ್ರಿಸ್ತೇಸುವಿನಲ್ಲಿ ಪ್ರತಿಷ್ಠಿತರೂ ದೇವಜನರಾಗುವದಕ್ಕೆ ಕರೆಯಲ್ಪಟ್ಟವರೂ ..." ಆಗಿರುವರೆಂದು ಹೇಳಿದನು (1 ಕೊರಿಂಥ 1:2). ಹೌದು, ಸಭೆಯು ದೇವರ ಸಭೆಯಾಗಿದೆ.

ಹೀಗಿದ್ದರೂ ಯೇಸುವು, "ಈ ಬಂಡೆಯ ಮೇಲೆ *ನನ್ನ ಸಭೆಯನ್ನು* ಕಟ್ಟುವೆನು; ಪಾತಾಳ ಲೋಕದ ಬಲವು ಅದನ್ನು ಸೋಲಿಸಲಾರದು" (ಮತ್ತಾಯ 16:18; ಒತ್ತಿ ಹೇಳಿದ್ದು ನನ್ನದು) ಎಂದು ಹೇಳಿದ್ದಾನೆ. ಕ್ರಿಸ್ತನು ತನ್ನ ರಕ್ತದಿಂದ ಸಭೆಯನ್ನು ಕೊಂಡುಕೊಂಡಿದ್ದರಿಂದ, ಸಭೆಯು ನಿಜವಾಗಿಯೂ ಕ್ರಿಸ್ತನಿಗೆ ಒಳಪಟ್ಟಿರುತ್ತದೆ (ಅಪೊಸ್ತಲರ ಕೃತ್ಯಗಳು 20:28), ಆದುದರಿಂದ ಪೌಲನು ಸಭೆಯನ್ನು ಕ್ರಿಸ್ತನ ಸಭೆಯೆಂದು ಸಂಬಂಧಿಸಿ ಹೇಳಿದನು (ರೋಮಾಪುರ 16:16).

ಆದುದರಿಂದ "ದೇವರ ಸಭೆ," ಎಂಬ ಮಾತು ಸಭೆಯು ದೇವರ ಮತ್ತು ಕ್ರಿಸ್ತನ ಜೊತೆ ಒಡೆತನದ ರೀತಿಯನ್ನು ಅನ್ವಯಿಸುತ್ತದೆ, "ನಾನೂ ತಂದೆಯೂ ಒಂದಾಗಿದ್ದೇವೆ" ಎಂದು ಯೇಸು ಹೇಳಿದನು (ಯೋಹಾನ 10:30); "ತಂದೆಯ ಅನುಗ್ರಹವಿಲ್ಲದೆ ಯಾರೂ ನನ್ನ ಬಳಿಗೆ ಬರಲಾರರು ಎಂಬದನ್ನು ನಾನು ನಿಮಗೆ ಅದರ ದೆಸೆಯಿಂದಲೇ ಹೇಳಿದೆನು" (ಯೋಹಾನ 6:65); ಮತ್ತು "ನಾನು ನನ್ನ ತಂದೆಯಲ್ಲಿಯೂ ನೀವು ನನ್ನಲ್ಲಿಯೂ ನಾನು ನಿಮ್ಮಲ್ಲಿಯೂ ಇರುವದನ್ನು ನೀವು ಆ ದಿನದಲ್ಲಿ ತಿಳಿದುಕೊಳ್ಳುವಿರಿ" (ಯೋಹಾನ 14:20) ಎಂದೂ ಹೇಳಿದನು. ಪರಲೋಕ ದಲ್ಲಿರುವ ತಂದೆಯು ಜಗತ್ತಿನ ರಕ್ಷಣೆಯನ್ನು ಯೋಚಿಸಿದನು; ಕುಮಾರನಾದ ಯೇಸುವು ಆ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಭೂಲೋಕಕ್ಕೆ ಬಂದನು. ಆದುದರಿಂದ, ಒಂದು ಅರ್ಥದಲ್ಲಿ, ಸಭೆಯು ದೇವರ ಸಭೆ ಆಗಿರುತ್ತದೆ; ಇನ್ನೊಂದು ಅರ್ಥದಲ್ಲಿ ಸಭೆಯು ಕ್ರಿಸ್ತನ ಸಭೆಯಾಗಿರುತ್ತದೆ. ಸಭೆಯ ಬಗ್ಗೆ ಸಂಪೂರ್ಣ ಸತ್ಯವನ್ನು ಅರ್ಥಮಾಡಿಕೊಳ್ಳುವುದಕ್ಕೆ ಎರಡೂ ಸತ್ಯಗಳು ಅಗತ್ಯವಾಗಿವೆ.

"ದೇವರ ಸಭೆ" ಎಂಬ ಮಾತಿನಲ್ಲಿ ಪ್ರಕಟವಾದ ಒಡೆತನದ ಸಂಗತಿಯು ಆದಿಕಾಂಡ 32:24-32ರಲ್ಲಿ ಒಂದು ಪರಿಚಿತವಾದ ಹಳೇ ಒಡಂಬಡಿಕೆಯ ಘಟನೆಯಿಂದ ಉದಾಹರಿಸಲ್ಪಟ್ಟಿದೆ. "ಯಾಕೋಬ" ಎಂಬ ಹೆಸರಿನ ಅರ್ಥ "ಮೋಸಗಾರ" ಎಂದಾಗುತ್ತದೆ. ಆ ಹೆಸರನ್ನು ಧರಿಸಿದವನಿಗೆ ಅವನ ಜೀವನದ ಮೊದಲಿನ ಅರ್ಧಭಾಗಕ್ಕೆ ಚೆನ್ನಾಗಿ ಅರ್ಹವಾದದ್ದಾಗಿದೆ. ಯಾಕೋಬನು, ಹಳೇ ಒಡಂಬಡಿಕೆಯಲ್ಲಿ ಮೊದಲನೆಯ ಸಲ ಕಾಣಿಸಿಕೊಂಡಂತೆ, ಅವನಿಗೆ ಅವನ ಜೀವನದ ಮೇಲೆ ಈ ಕೆಳಗಿನ ಗುರುತು ಇಡಲ್ಪಡಬಹುದು: "ಈಗ ನಾನಿರುವಂತೆ ನನಗೆ ತೀರ್ಪುಮಾಡ ಬೇಡಿರಿ, ಯಾಕಂದರೆ ದೇವರು ನನ್ನೊಂದಿಗೆ ಇನ್ನೂ ಮುಕ್ತಾಯ ಗೊಳಿಸಿರುವುದಿಲ್ಲ!" ದೇವರು ಯಾಕೋಬನನ್ನು ಬದಲಾಯಸಿದನು ಮತ್ತು ಅವನಿಗೆ "ಇಸ್ರಾಯೇಲ್" ಎಂಬ ಹೆಸರನ್ನು ಕೊಟ್ಟನು. ಈ ಹೆಸರು ಬದಲಾವಣೆಯೊಂದಿಗೆ ಸರಿಯಾಗಿ ಹೊಂದಿಕೊಳ್ಳುತ್ತದೆ.

ಅವನ ಮಾರ್ಪಡುವಿಕೆಗೆ ಸಹಾಯಮಾಡಿದ ಒಂದು ಘಟನೆಯು ಅವು ಯಬ್ಬೋಕ್ ಬಳಿಯಲ್ಲಿ ರಾತ್ರಿಯಲ್ಲಿ ದೇವದೂತನೊಂದಿಗೆ ಹೋರಾಟ ಮಾಡಿದ್ದು. ಯಾಕೋಬನು ಒಬ್ಬನೇ ಇದ್ದಾಗ, ಒಬ್ಬ ಮನುಷ್ಯನು ಕಾಣಿಸಿಕೊಂಡನು ಮತ್ತು ಅವನೊಂದಿಗೆ ಹೋರಾಡಲು ಪ್ರಾರಂಭಿಸಿದನು. ಅವನು ಮರ್ತ್ಯ ಮಾನವನೆಂದು ಯೋಚಿಸಿ, ಯಾಕೋಬನು ನಿರ್ಧರಿಸಿಕೊಂಡು ಕಠಿಣವಾಗಿ ಹೋರಾಡಿದನು. ಬೆಳಗಾಗುತ್ತಿರುವಾಗ, ಗುರುತಿಸಲಾಗದ ಮನುಷ್ಯನು ಯಾಕೋಬನ ಸೊಂಟದ ಕೀಲನ್ನು ಮುಟ್ಟಿದನು ಮತ್ತು ಅದರ ಸಂದು ಸರಿಯಿತು. ಬಲಶಾಲಿಯು ಯಾಕೋಬನಿಗೆ "ನನ್ನನ್ನ ಹೋಗಲಿಕ್ಕೆ ಬಿಡು, ಬೆಳಾಗುತ್ತಲಿದೆ" ಎಂದು ಹೇಳಿದನು. ಯಾಕೋಬನು ಬಹುಶಃ ಈಗ ತನ್ನೊಂದಿಗೆ ಹೋರಾಡುತ್ತಿರುವವನು ದೈವಿಕ ಜೀವಿಯಾಗಿರುವನೆಂದು ತಿಳಿದುಕೊಂಡು ಹೀಗೆ ಹೇಳಿದನು: "ನೀನು ನನ್ನನ್ನು ಆಶೀರ್ವದಿಸಿದ ಹೊರತು ನಿನ್ನನ್ನು ಬಿಡುವುದಿಲ್ಲ." ಆಗ ದೇವದೂತನು ಯಾಕೋಬನಿಗೆ "ನಿನ್ನ ಹೆಸರೇನು?" ಎಂದು ಕೇಳಿದನು. ಯಾಕೋಬನು ಉತ್ತರ ಕೊಟ್ಟಾಗ, ಅವನಿಗೆ ಹೀಗೆ ಹೇಳಲ್ಪಟ್ಟಿತು: "ಇನ್ನು ಮೇಲೆ ನೀನು ಯಾಕೋಬನೆನ್ನಿಸಿಕೊಳ್ಳುವದಿಲ್ಲ; ದೇವರ ಸಂಗಡಲೂ ಮನುಷ್ಯರ ಸಂಗಡಲೂ ಹೋರಾಡಿ ಗೆದ್ದವನಾಗಿದ್ದರಿಂದ ನಿನಗೆ ಇಸ್ರಾಯೇಲೆಂದು ಹೆಸರುಂಟಾಗುವದು" (ಆದಿಕಾಂಡ 32:28).

---

*ದೇವರ ಬಗ್ಗೆ ತಂದೆ. ಮೂಲಕರ್ತ,*
*ಜೀವಿಸುವ ಶಕ್ತಿ, ಕಾಪಾಡುವವನು, ಆದರಿಕನು,*
*ಮತ್ತು ಸಭೆಯನ್ನು ಆಳುವವನು ಎಂಬಂತೆ*
*ಮಾತನಾಡಬಹುದು.*

---

ಯಾಕೋಬನನ್ನು ಆಶೀರ್ವದಿಸಿದ ನಂತರ, ಪಾರಲೌಕಿಕ ಸಂದರ್ಶಕನು ಆ ಸ್ಮರಣಾರ್ಥಕವಾದ ರಾತ್ರಿಯೊಳಗೆ ಕಣ್ಮರೆಯಾದನು. ಈ ಘಟನೆಯ ಮಹತ್ವವು ಯಾಕೋಬನಿಗೆ ಸ್ಪಷ್ಟವಾದಾಗ, ಅವನು ಆ ಸ್ಥಳಕ್ಕೆ ಪೆನೀಯೇಲ್ ಎಂದು ಹೆಸರಿಟ್ಟನು. ಅದರ ಅರ್ಥ "ದೇವರ ಮುಖ" ಎಂದಾಗುತ್ತದೆ. ಆ ಸ್ಥಳಕ್ಕಾಗಿ ಅವನು ಆ ಹೆಸರನ್ನು ಆಯ್ದುಕೊಂಡನು. ಅವನು "ದೇವರನ್ನು ಮುಖಾಮುಖಿಯಾಗಿ" ನೋಡಿದರೂ ತನ್ನ ಪ್ರಾಣವು ಉಳಿಯಿತು ಎಂದು ಹೇಳಿದನು (ಆದಿಕಾಂಡ 32:30).

ಅಂಥದೇ ದರ್ಶನವು ಪ್ರತಿಯೊಬ್ಬ ಕ್ರೈಸ್ತನಿಗೆ ಬರತಕ್ಕದ್ದು. ಸಭೆಯು *ದೇವರ* ಸಭೆಯಾಗಿದೆ; ಅದು ದೇವರಿಗೆ ಒಳಪಟ್ಟಿರುತ್ತದೆ. ನಾವು ದೇವಾಲಯದೊಳಗೆ ಪ್ರವೇಶಿಸುವಾಗ ನಾವು ದೇವರ ಒಡತನದ ಮತ್ತು ದೇವರಿಂದ ನಿಯಂತ್ರಿಸಲ್ಪಟ್ಟ ಸ್ಥಳದಲ್ಲಿ ನಾವು ಇರುತ್ತೇವೆ. ದೇವಾಲಯದಲ್ಲಿ, ರೂಪಕಾಲಂಕಾರವಾಗಿ ಮಾಡುವಾಗ, ನಾವು ದೇವರೊಂದಿಗೆ ಮುಖಾಮುಖಿಯಾಗಿರುತ್ತೇವೆ.

ಕ್ರಿಸ್ತನ ಸಭೆಯಾಗಿ, ದೇವರು ಇರುವಲ್ಲಿ ನಾವು ಇರುತ್ತೇವೆ. ದೇವರು ನಮ್ಮಲ್ಲಿ ವಾಸಿಸುತ್ತಾನೆ ಹಾಗೂ ದೇವರಿಂದ ನಡಿಸಲ್ಪಡುತ್ತೇವೆ. ಸಭೆಯ ಮೇಲೆ ದೇವರ ಒಡೆತನದ ಮುದ್ರೆ ಇರುತ್ತದೆ ಆತನ ಹಸ್ತಾಕ್ಷರವು ಅಳಿಸಲ್ಪಟ್ಟು, ಅದರ ಸ್ಥಳದಲ್ಲಿ ಒಡೆತನದ ಮನುಷ್ಯನ ಮುದ್ರೆಯು ಹಾಕಲ್ಪಟ್ಟರೆ, ಅತ್ಯಂತ ದೊಡ್ಡ ಪ್ರಮಾಣದ ದುರ್ಘಟನೆಯು ಸಂಭವಿಸುವುದು - ಸಭೆಯು ಪರಿಶುದ್ಧಾತ್ಮನು ವಾಸವಾಗಿರುವ ದೇವರ ಸಭೆಯಾಗಿರುವುದು ನಿಂತುಹೋಗುವುದು ಮತ್ತು ಮನುಷ್ಯನ ಜೀವವಿಲ್ಲದ ಸಭೆಯಾಗುವುದು.

## ಅದರ ನಿರಂತರ ಜೀವನದೊಳಗೆ

ಮೂರನೆಯದು, "ದೇವರ ಸಭೆಯು" ಸಭೆಯ ನಿರಂತರ ಅಸ್ತಿತ್ವದೊಳಗೆ ಒಳನೋಟವನ್ನು ಕೊಡುತ್ತದೆ. ದೇವರು ತನ್ನ ಸಭೆಯನ್ನು ಬಲಪಡಿಸುತ್ತಾನೆ, ಸಭೆಯ ಸೃಷ್ಟಿ ಮತ್ತು ಒಡೆತನದ ಕಾರಣದಿಂದ, ದೇವರು ಅದರ ಜೀವನಕ್ಕಾಗಿ ಜವಾಬ್ದಾರ ನಾಗಿದ್ದಾನೆ.

ಕೊರಿಂಥದಲ್ಲಿಯ ದೇವರ ಸಭೆಗೆ ವಂದನೆ ಹೇಳುವುದರಲ್ಲಿ ಪೌಲನು, ದೇವರನ್ನು ಕೃಪೆಯ ಮತ್ತು ಸಮಾಧಾನದ ಮೂಲನಂತೆ ಚಿತ್ರಿಸಿದ್ದಾನೆ: "ನಮ್ಮ ತಂದೆಯಾಗಿರುವ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ" (1 ಕೊರಿಂಥ 1:3). ಕ್ರೈಸ್ತರು ದೇವರಿಂದ "ನಮ್ಮ ಕರ್ತನಾದ ಯೇಸುಕ್ರಿಸ್ತನೆಂಬ ತನ್ನ ಮಗನ ಅನ್ಯೋನ್ಯತೆಗೆ" (1 ಕೊರಿಂಥ 1:9) ಕರೆಯಲ್ಪಟ್ಟಿದ್ದಾರೆ ಎಂದೂ ಹೇಳಿದನು. ನಾವು ಕ್ರಿಸ್ತನೊಳಗೆ ತರಲ್ಪಟ್ಟಾಗ, ದೇವರು ನಮ್ಮನ್ನು ತನ್ನ ಮಕ್ಕಳಂತೆ ಅಂಗೀ ಕರಿಸಿಕೊಂಡನು (ಎಫೆಸ 1:5). ಅದರ ಪರಿಣಾಮವು ಹೊಸ ಒಡಂಬಡಿಕೆಯಲ್ಲಿ ಸಭೆಯು ದೇವರ ಕುಟುಂಬದಂತೆ ತಿಳಿಯಲ್ಪಟ್ಟಿದೆ (1 ತಿಮೊಥೆ 3:15). ಅದರ ಪ್ರಕಾರ ವಾಗಿ, ದೇವರೊಂದಿಗೆ ಕ್ರೈಸ್ತನ ಅನುದಿನದ ನಡೆಯುವಿಕೆಯಲ್ಲಿ, ಅವನು "ದೇವರ ಜೀವದಲ್ಲಿ" ಪಾಲುಗಾರನಾಗುವನು. ಅನ್ಯರು ತಮ್ಮ ಮನಸ್ಸಿನ ಮತ್ತು ಜೀವನದ ದುಷ್ಟತ್ವದಲ್ಲಿ, "ದೇವರಿಂದಾಗುವ ಜೀವಕ್ಕೆ" ತಮ್ಮನ್ನು ಅನ್ಯರಾಗಿಸಿಗೊಂಡಿದ್ದಾರೆಂದು ಪೌಲನು ಎಫೆಸದವರಿಗೆ ಹೇಳಿದನು (ಎಫೆಸ 4:18). ದೇವರ ಬಗ್ಗೆ ತಂದೆಯಂತೆ, ಮೂಲನಂತೆ, ಜೀವಿಸುವ ಬಲದಂತೆ, ಕಾಪಾಡುವವನಂತೆ ಆದರಿಕನಂತೆ, ಮತ್ತು ಸಭೆಯನ್ನು ಆಳುವವನಂತೆ ಮಾತಾಡಬಹುದು.

ವರ್ಷಗಳ ಹಿಂದೆ, ನನ್ನ ಮನೆಯ ಸಮೀಪದಲ್ಲಿ ಇದ್ದ ಪಟ್ಟಣದಲ್ಲಿ ಒಂದು ವಾರ ನಾನು ಪ್ರಸಂಗಿಸುತ್ತಿದ್ದೆನು. ಸಭೆಯ ಕೆಲವು ಸದಸ್ಯರೊಂದಿಗೆ ನಾನು ಸಂದರ್ಶಿಸುತ್ತಿದ್ದಾಗ, ಒಬ್ಬ ಮನುಷ್ಯನು ಕೆಲವು ವರ್ಷಗಳ ಮೊದಲು ತನ್ನ ಕೆಲಸದೊಂದಿಗೆ ಸಂಬಂಧಿಸಿ ತನಗಾದ ಅನುಭವದ ಬಗ್ಗೆ ಹೇಳಿದನು.

ಅವನು ಒಂದು ಸರ್ವಿಸ್ ಸ್ಟೇಶನ್ನಿನ ಮ್ಯಾನೇಜರ್ ಆಗಿದ್ದನು. ಸರ್ವಿಸ್ ಸ್ಟೇಶ ನ್ನಿನ ಮ್ಯಾನೇಜರನು ಒಂದು ದಿನ ಅವನ ಬಳಿಗೆ ಬಂದು ಸರ್ವಿಸ್ ಸ್ಟೇಶನ್ನನ್ನು ಭಾನುವಾರವೂ ತೆರೆದಿಡಬೇಕೆಂದು ಅವನಿಗೆ ನಿರ್ದೇಶಿಸಿದನು, "ನಾನು ವಾರದಲ್ಲಿ ಆರು ದಿನ ನಿಮಗಾಗಿ ಕೆಲಸಮಾಡುವೆನು ಮತ್ತು ನಿಮ್ಮ ಕೆಲಸದವನಾಗಿ ಅತ್ಯುತ್ತಮವಾದ ದ್ದನ್ನು ನಿಮಗೆ ಕೊಡುವೆನು. ಆದರೆ ಭಾನುವಾರ ನಿಮಗಾಗಿ ಕೆಲಸಮಾಡಲಾರೆನು. ಭಾನುವಾರ ಪ್ರಾತಃಕಲಗಳಲ್ಲಿ ಮತ್ತು ಸಾಯಂಕಲಗಳಲ್ಲಿ ಆರಾಧಿಸುವದಕ್ಕಾಗಿ ಒಪ್ಪಿಸಿ ಕೊಟ್ಟಿದ್ದೇನೆ. ನಾನು ಆ ಒಪ್ಪಿಸಿಕೊಡುವಿಕೆಯಿಂದ ಹಿಂದಿರುಗಿ ಬರಲಾರೆನು" ಎಂದು ಉತ್ತರವಾಗಿ ಹೇಳಿದನು. "ಹಾಗಿದ್ದರೆ ನಾನು ಬೇರೆ ಮ್ಯಾನೇಜರನನ್ನು ಸಮೀಪಿಸಿಕೊಳ್ಳ ಬೇಕಾಗುವದು. ಇನ್ನು ಕೆಲವು ದಿನಗಳಲ್ಲಿ ನನ್ನ ತೀರ್ಮಾನವನ್ನು ನಿನಗೆ ತಿಳಿಸುವೆನು" ಎಂದು ಯಜಮಾನನು ಹೇಳಿದನು.

ಕ್ರಿಸ್ತನಲ್ಲಿ ಈ ಸಹೋದರನು ತಾನು ಕೆಲಸವನ್ನು ಕಳೆದುಕೊಂಡರೆ ಏನು ಮಾಡಬೇಕೆಂಬುದನ್ನು ತಿಳಿದಿರಲಿಲ್ಲ, ಅದು ದೊಡ್ಡ ಸಂಬಳದ ಕೆಲಸವೂ ಆಗಿರಲಿಲ್ಲ, ಆದರೆ ಅದು ತನ್ನ ಕುಟುಂಬಕ್ಕಾಗಿದ್ದ ಕೇವಲ ಆದಾಯವಾಗಿತ್ತು. ಮಾಡಲು ಅವನು ತಿಳಿದಿದ್ದು ಪ್ರಾರ್ಥನೆಯೊಂದೇ, ಮಾಡಲು ಆತನಿಗೆ ಯಾವುದು ಅತ್ಯುತ್ತಮವಾಗಿ ತೋ ರುತ್ತದೆ ಎಂದು ದೇವರನ್ನು ಕೇಳುವುದು ಎಂದು ಅವನು ಹೇಳಿದನು. ಎರಡು ದಿನಗಳ ನಂತರ, ಯಜಮಾನನು ಹಿಂದಿರುಗಿ ಬಂದು ಹೀಗೆ ಹೇಳಿದನು: "ಈ ಸರ್ವಿಸ್ ಸ್ಟೇ

ಶನ್ ಭಾನುವಾರ ತೆರೆದಿಡಲ್ಪಡಬೇಕೆಂದು ನನ್ನ ಆಶೆ; ಆದರೆ ನಾನು ಅದನ್ನು ಮಾಡಿದರೆ, ಇನ್ನು ಮುಂದೆ ನಾನು ನಿನ್ನನ್ನು ಮ್ಯಾನೇಜರನೆಂದು ಉಪಯೋಗಿಸಲಿಕ್ಕಾಗುವುದಿಲ್ಲ. ನನಗಿರುವ ಅತ್ಯುತ್ತಮ ಕೆಲಸಗಾರರಲ್ಲಿ ನೀನು ಒಬ್ಬನಾಗಿದ್ದೀ. ನಾನು ನಿನ್ನನ್ನು ನನ್ನ ಮೇನೇಜರ್ ಆಗಿ ಇಟ್ಟುಕೊಳ್ಳಲಿಕ್ಕಾಗುವಂತೆ, ಭಾನುವಾರ ಸರ್ವೀಸ್ ಸ್ಟೇಶನ್ನನ್ನು ತೆರೆದಿಡುವ ವಿಚಾರವನ್ನು ಮರೆತುಬಿಡಲು ತೀರ್ಮಾನಿಸಿಕೊಂಡಿ ದ್ದೇನೆ." ಈ ಸಹೋದರನು ಹೀಗೆ ಹೇಳಿದನು, "ನನ್ನ ಯಜಮಾನನಿಂದ ಈ ಪ್ರೋತ್ಸಾಹ ದಾಯಕ ವರ್ತಮಾನವನ್ನು ಸ್ವೀಕರಿಸಿಕೊಂಡ ನಂತರ, ನನ್ನ ಹೃದಯದಲ್ಲಿ ಮತ್ತಾಯ 6:33ನ್ನು ಮೌನವಾಗಿ ಉಲ್ಲೇಖಿಸಿ ಕೊಂಡೆನು: 'ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು.' "

ಕಾರ್ಯಾಚರಣೆಯಲ್ಲಿ, ಈ ನಂಬಿಕೆಯ ಮನುಷ್ಯನು "ದೇವರ ಸಭೆ" ಎಂಬ ಮಾತುಗಳಲ್ಲಿ ಬಲಪಡಿಸುವ ಸತ್ಯವು ಹುದುಗಿಕೊಂಡಿರುವದನ್ನು ಗುರುತಿಸಿದನು. ದೇವರು ತನ್ನ ಸ್ವಂತದವರನ್ನು ನೋಡಿಕೊಳ್ಳುತ್ತಾನೆ. ಆತನು ತನ್ನ ಕುಟುಂಬವನ್ನು, ಸಭೆಯನ್ನು ಕಾಪಾಡುತ್ತಾನೆ, ಆಶೀರ್ವದಿಸುತ್ತಾನೆ, ಪ್ರೀತಿಸುತ್ತಾನೆ ಮತ್ತು ಸುರಕ್ಷಿತವಾಗಿ ಇಡುತ್ತಾನೆ.

ಸಭೆಯು ದೈವಿಕವಾದದ್ದು ಮತ್ತು ದೇವರ ಮಹಿಮೆಗಾಗಿ ಎಲ್ಲಾ ಸಂಗತಿಗಳನ್ನು ಮಾಡಲಿಕ್ಕೆ ತನ್ನ ಸ್ವಭಾವದಿಂದ ಬಂಧಿಸಲ್ಪಟ್ಟಿರುತ್ತದೆ. ಅದು ದೇವರ ಬಲವಾದ ಹಸ್ತದಿಂದ ಸಂರಕ್ಷಿಸಲ್ಪಡುತ್ತದೆ, ಮತ್ತು ತನ್ನ ಅನುದಿನದ ಆತ್ಮಿಕ ಅಸ್ತಿತ್ವಕ್ಕಾಗಿಯೂ ತನ್ನ ನಿತ್ಯವಾದ ಭವಿಷ್ಯಕ್ಕಾಗಿಯೂ ದೇವರ ಮೇಲೆ ಅವಲಂಭಿಸಿರುತ್ತದೆ.

## ಮುಕ್ತಾಯ

ಹಾಗಾದರೆ, ದೇವರಿಗೆ ಹೊಸ ಒಡಂಬಡಿಕೆಯ ಸಭೆಯೊಂದಿಗೆ ವಿಶೇಷ ಸಂಬಂಧವಿರುವುದು ಸ್ಪಷ್ಟವಾಗಿದೆ. ಸಮಯಕ್ಕಿಂತ ಮುಂಚಿತವಾಗಿಯೇ ಅದರ ಬರೋಣವನ್ನು ಆತನು ಯೋಜಿಸಿದನು, ಆತನು ಅದರ ಒಡೆಯನು ಮತ್ತು ಆತನು ಅದರೊಳಗೆ ಸ್ವಾಸವನ್ನು ತುಂಬಿಸುತ್ತಾನೆ. ಆತನು ಸಭೆಗೆ ಪ್ರೀತಿಯನ್ನು, ನಾಯಕತ್ವವನ್ನು ಮತ್ತು ಜೀವವನ್ನು ಕೊಡುತ್ತಾನೆ: ಸಭೆಯಿಂದ ಆತನ ಕೃಪೆಯ ಮತ್ತು ಮಹಿಮೆಯ ವೈಭವವು ಹೊರಗೆ ಹರಡುವುದು. ಆತನ ಸಭೆಯ ಸದಸ್ಯರು ಆತನ ವಾಕ್ಯದ ನಡಿಸುವಿಕೆಯ ಮುಖಾಂತರ ಆತನ ದೈವಿಕ ಸ್ವಭಾವದಲ್ಲಿ ಪಾಲುಗರರಾಗುವರು (2 ಪೇತ್ರ 1:3). ಸಭೆಯು ಆತನ ಕುಟುಂಬ ಹಾಗೂ ನಿತ್ಯವಾದ ವಿವಾಹದಂತೆ, ಆತನ ಯೋಜನೆಗಳು ಇಂದಿಗಾಗಿಯೂ ಭವಿಷ್ಯಕ್ಕಾಗಿಯೂ ಜೋಡಿಸಲ್ಪಟ್ಟಿವೆ.

ಒಂದು ಅರ್ಥದಲ್ಲಿ, ದೇವರ ಸಭೆಯ ಹೊರಗೆ ಇರುವವನು ದೇವರ ಹೊರಗೆ ಮತ್ತು ದೇವರಿಂದ ದೂರದಲ್ಲಿ ಇರುವನು. ತನ್ನ ಕಾಪಾಡುವ ಹಸ್ತದಿಂದ, ಆತನು ಸಭೆಯನ್ನು ತನ್ನ ಸಿಂಹಾಸನದ ಬಳಿಯಲ್ಲಿ ಅದು ನಿತ್ಯವಾದ ತನ್ನ ಮನೆಗೆ ತರಲ್ಪಡುವವರೆಗೆ ಎಲ್ಲಾ ಕೇಡುಗಳಿಂದ ಕಾಪಾಡುವನು. ತನ್ನ ದೈವಿಕ ಪರಿಪಾಲನೆಯಿಂದ, ದೇವರು ತನ್ನ ಸಭೆಗೆ ನಮಗೆ ಅಗತ್ಯವಾದದ್ದನ್ನು ಪ್ರೀತಿಯಿಂದ ಒದಗಿಸುವನು. ಅದರಿಂದ ನಾವು ಮಾಡಬೇಕೆಂದು ಆತನು ಕೇಳಿರುವುದನ್ನು ಆತನು ಬಯಸುವವರೆಗೆ ಮಾಡುವೆವು.

1 ಸಮುವೇಲ 17ರಲ್ಲಿ ದಾವೀದನಂತೆ, ಸಭೆಯು ದೇವರ ಬಲದಲ್ಲಿ ಭವಿಷ್ಯದ ಎಲ್ಲಾ ವೈರಿಗಳನ್ನು ಎದುರಿಸುವುದು, ಪ್ರತಿಯೊಂದು ಸೈನ್ಯವು ತನ್ನ ಅತ್ಯುತ್ತಮ ಮನುಷ್ಯನನ್ನು ಕಳುಹಿಸಬೇಕಾಗಿತ್ತು, ಮತ್ತು ಇಬ್ಬರು ಮುಷ್ಠಿ ಯುದ್ಧ ಮಾಡಬೇಕಾಗಿತ್ತು. ಗೆಲ್ಲುವವನ ದೇಶವು ಯುದ್ಧದ ಜಯ ಚಿಹ್ನೆಗಳನ್ನು ಪಡೆಯುವುದು. ಫಿಲಿಷ್ಟಿಯರಿಗೆ ಅವನ

ಮನುಷ್ಯನಿದ್ದನು - ಒಂಭತ್ತುವರೆ ಎತ್ತರದ ಧೈತ್ಯನು, ಇಸ್ರಾಯೇಲ್ಯರು ಕಳುಹಿಸುವವನನ್ನು ತುಚ್ಛೀಕರಿಸುವನಾಗಿದ್ದನು. ಭಯದಿಂದ ತುಂಬಿದ ಇಸ್ರಾಯೇಲ್ಯರು ಏನು ಮಾಡಬೇಕೆಂದು ತಿಳಿಯದಾದರು. ಜೀವನದ ದೊಡ್ಡ ಯುದ್ಧದ ಕಂದಕಗಳಲ್ಲಿ ದೇವರ ಜನರು ದೇವರ ಬಲವನ್ನು ಹೇಗೆ ಉಪಯೋಗಿಸುವರು ಎಂಬುದನ್ನು ಇಸ್ರಾಯೇಲ್ಯರಿಗೆ ದಾವೀದನು ತೋರಿಸಬೇಕಾಗಿತ್ತು.

ದಾವೀದನು ಇಸ್ರಾಯೇಲ್ಯರ ಕ್ಯಾಂಪಿನಲ್ಲಿ ಕಾಣಿಸಿಕೊಂಡನು ಮತ್ತು ಗೊಲ್ಯಾತನನ್ನು ಎದುರಿಸಲು ಕರ್ತನ ಬಲದಲ್ಲಿ ಹೋಗಲು ಸಿದ್ಧನಾದನು. ಅವನು ದೇವರ ಮನುಷ್ಯನಾಗಿದ್ದನು, ಮತ್ತು ಅವನು ಅದನ್ನು ತಿಳಿದಿದ್ದನು, ಅವನು ದೇವರ ಅನ್ಯೋನ್ಯತೆಯಲ್ಲಿ ನಡೆದಿದ್ದನು ಮತ್ತು ದೇವರ ವಾಗ್ದಾನದಲ್ಲಿ ಪಾಲುಗಾರನಾಗಿದ್ದನು, ದೇವರು ತನ್ನ ಸೈನ್ಯದ ನಾಯಕನಾಗಿರುವನು ಮತ್ತು ದೇವರ ಸೈನಿಕರು ಆತನ ಬಲದಿಂದ ತುಂಬಿದವರಾಗಿ ಯುದ್ಧಕ್ಕೆ ಹೋದರೆಂದು ಅವನು ನಂಬಿದನು. ದಾವೀದನು ಗೊಲ್ಯಾತನನ್ನು ಸಮೀಪಿಸಿದಂತೆ, ತನಗಾದ ಅಸಹ್ಯಕರ ಅವಮಾನಗಳನ್ನು ಜೀವಿಸುವ ದೇವರಲ್ಲಿ ನಂಬಿಕೆಯ ಒಪ್ಪಿಗೆಯೊಂದಿಗೆ ಎದುರಿಸಿದನು. “ನೀನು ಈಟಿ ಕತ್ತಿ ಬರ್ಜಿಗಳೊಡನೆ ನನ್ನ ಬಳಿಗೆ ಬರುತ್ತೀ; ನಾನಾದರೋ ನೀನು ಹೀಯಾಳಿಸಿದಂಥ ಸೇನಾಧೀಶ್ವರನೂ ಇಸ್ರಾಯೇಲ್ಯರ ಯುದ್ಧಭಟರ ದೇವರೂ ಆಗಿರುವ ಯೆಹೋವನ ನಾಮದೊಡನೆ ನಿನ್ನ ಬಳಿಗೆ ಬರುತ್ತೇನೆ. ಆತನು ಈ ಹೊತ್ತು ನಿನ್ನನ್ನು ನನ್ನ ಕೈಗೆ ಒಪ್ಪಿಸಿಕೊಡುವನು” (1 ಸಮುವೇಲ 17:45) ಎಂದು ಅವನು ಹೇಳಿದನು, ಆ ದಿನ ಕರ್ತನು ದಾವೀದನೊಂದಿಗೆ ಇದ್ದನು. ಮತ್ತು ಗೊಲ್ಯಾತನು ದಾವೀದನ *ಕವಣೆಯಿಂದ* ಹಾಗೂ ಕರ್ತನ ಬಲವುಳ್ಳ ತೋಳಿನಿಂದ ಬೋರಲು ಬಿದ್ದನು.

ದೇವರು ಇಸ್ರಾಯೇಲ್ಯರಿಗೆ ಮತ್ತು ದಾವೀದನಿಗೆ ಏನಾಗಿದ್ದನೋ ಸಭೆಗೂ ಅದಾಗಿದ್ದಾನೆ! ಸಭೆಯು ದೇವರ ಸಭೆಯಾಗಿದೆ, ಆತನ ಬಲ, ಗೌರವ, ಜ್ಞಾನ ಮತ್ತು ಜೀವದಿಂದ ಸಜ್ಜುಗೊಳಿಸಲ್ಪಟ್ಟಿದೆ.

ಒಬ್ಬನು ಹೊಸ ಒಡಂಬಡಿಕೆಯ ಸಭೆಯೊಳಗೆ ಬರುವಾಗ, ದೇವರ ದೈವಿಕ ಜೀವನದ ವೃತ್ತದೊಳಗೆ ಕಾಲಿಡುತ್ತಾನೆ, ಕ್ರೈಸ್ತರು ಕ್ರಿಸ್ತನಿಗೆ ಒಳಪಟ್ಟಿರುವದಲ್ಲದೇ, ಕ್ರಿಸ್ತನ ಮುಖಾಂತರ ದೇವರಿಗೆ ಒಳಪಟ್ಟಿದ್ದಾರೆ. ದೇವರಲ್ಲಿ ಅವರು ಅಜೇಯರಾದ, ಎದುರಿಸಲಾಗದ, ಜೀವಿಸುವ ದೇವರ ಅದ್ವಿತೀಯವಾದ ಸಭೆಯಾಗಿರುತ್ತಾರೆ.

---

ಟಿಪ್ಪಣಿ

[1]ಅಪೊಸ್ತಲರ ಕೃತ್ಯಗಳು 20:28; 1 ಕೊರಿಂಥ 1:2; 10:32; 11:22; 15:9; 2 ಕೊರಿಂಥ 1:1; ಗಲಾತ್ಯ 1:13; 1 ತಿಮೊಥೆ 3:5. “ದೇವರ ಸಭೆಗಳು” ಎಂಬುದು ಹೊಸ ಒಡಂಬಡಿಕೆಯಲ್ಲಿ ಮೂರು ಸಲ ಕಂಡುಬರುತ್ತದೆ: 1 ಕೊರಿಂಥ 11:16; 1 ಥೆಸಲೊನೀಕ 2:14; 2 ಥೆಸಲೊನೀಕ 1:4. “ಜೀವಿಸುವ ದೇವರ ಸಭೆ” ಎಂಬುದು ಒಂದು ಸಲ ಕಂಡುಬರುತ್ತದೆ: 1 ತಿಮೊಥೆ 3:15.

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ನೀವು ಯಾವುದೇ ವಸ್ತುವಿನ, ಸ್ಥಳದ ಇಲ್ಲವೇ ವ್ಯಕ್ತಿಯ ಹೆಸರು ಹೇಳದ ಒಂದು ಸಂಭಾಷಣೆಯನ್ನು ಒಂದಾಗಿಸಿರಿ.
2. ದೇವರು ಮನುಷ್ಯನಿಗೆ ಯಾವಾಗ ಒಂದು ಭಾಷೆಯನ್ನು ಕೊಟ್ಟನು?
3. ಪರಿಣಾಮಕಾರಿ ಸಂಪರ್ಕ ಸಾಧನೆಗೆ ನಿರ್ದೇಶಿಸುವ ಸಾಮಾರ್ಥ್ಯವು ಸಹಾಯ

ಮಾಡುವುದೋ?

4. “ದೇವರ ಸಭೆ” ಎಂಬ ಮಾತು ಹೊಸ ಒಡಂಬಡಿಕೆಯಲ್ಲಿ ಎಷ್ಟು ಸಲ ಉಪಯೋಗಿಸಲ್ಪಟ್ಟಿದೆ?
5. ದೇವರು ಸಭೆಯನ್ನು ಯಾವಾಗ ಯೋಜಿಸಿದನು?
6. ಯಾವ ಅರ್ಥದಲ್ಲಿ ದೇವರು ಸಭೆಯ ಒಡೆತನದಲ್ಲಿ ಇರುವನೆಂದು ನೀನು ಹೇಳುವಿ?
7. ಕ್ರಿಸ್ತನು ಸಭೆಯ ಒಡೆಯನಾಗಿರುವನೋ? ನಿಮ್ಮ ಉತ್ತರವನ್ನು ವಿವರಿಸಿರಿ.
8. ಸಭೆಯನ್ನು ಬದಲಾಯಿಸಲು ಯಾವುದೇ ಮನುಷ್ಯನಿಗೆ ಹಕ್ಕು ಇರವುದೋ?
9. ಸಭೆಯ ಜೀವಿತಕ್ಕಾಗಿ ದೇವರು ಹೇಗೆ ಬಲವನ್ನು ಒದಗಿಸುವನು?
10. ಧೈತ್ಯನನ್ನು ನಾಶಪಡಿಸಲು ದಾವೀದನು ಯಾವ ಶಕ್ತಿಯನ್ನು ಉಪಯೋಗಿಸಿದನು?
11. ಸಭೆಯಾಗಿ ಮಾಡಲ್ಪಟ್ಟ ಜನರಿಗೆ ಸಭೆಯ ಹೊರಗಿರುವವರಿಗೆ ಇರದಂಥ ಶಕ್ತಿಗೆ ಅವಕಾಶವಿರುವುದೋ?

© 2009 Truth for Today